# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 100, ಬಸವೇಶ್ವರನಗರ, ಬೆಂಗಳೂರು

ಸಂಖ್ಯೆ:ಸ.ಅ/ವಾ–100/ಪಿಆರ್/42 2020–21 ದಿನಾಂಕ: 10.11.2020

### ವಾರ್ಡ್ ಸಮಿತಿ ಸಭೆಯ ನಡವಳಿಗಳು:–

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ. ರವರ ಆದೇಶ ಸಂಖ್ಯೆ: ಬಿ12[5]ಪಿಆರ್/35/2020–21. ದಿನಾಂಕ: 21.09.2020ರ ಆದೇಶದಂತೆ ದಿನಾಂಕ: 07.11.2020ರಂದು ವಾರ್ಡ್ ನಂ. 100 ಬಸವೇಶ್ವರನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:–**

1. ಶ್ರೀ ಧೃವರಾಜ್, ನೋಡಲ್ ಅಧಿಕಾರಿಗಳು, ಎಡಿ.ಟಿ.ಪಿ. ವಾರ್ಡ್ ನಂ. 100
2. ಶ್ರೀಮತಿ ವಿಜಯಲಕ್ಷ್ಮಿ, ಸಹಾಯಕ ಅಭಿಯಂತರರು, ವಾರ್ಡ್ ನಂ. 100
3. ಶ್ರೀಮತಿ ಸಂಧ್ಯಾ.ಕೆ.ಪಿ. ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಮಂಜುನಾಥ್, ಸಂಚಾರಿ ಪೋಲೀಸ್ ಅಧಿಕಾರಿಗಳು
6. ಶ್ರೀ ಸಂಗಪ್ಪ, ಪೋಲೀಸ್ ಠಾಣಾ ಅಧಿಕಾರಿ,
7. ಶ್ರೀ ಮಾರುತಿ, ಅರಣ್ಯಾಧಿಕಾರಿಗಳು
8. ಶ್ರೀ ಮಲ್ಲೇಶ್, ಕಂದಾಯ ಅಧಿಕಾರಿ
9. ಶ್ರೀ ಮೋಹನ್ ಕುಮಾರ್ , ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿ.

1. ವಾರ್ಡಿನ ಸದಸ್ಯರು ಮಾತನಾಡಿ, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗದಂತೆ ತುರ್ತಾಗಿ ರಸ್ತೆ ಗುಂಡಿಗಳನ್ನು ಮುಚ್ಚಲು ಕೋರಿದರು.

   ನೋಡಲ್ ಅಧಿಕಾರಿಗಳು ತ್ವರಿತ ಗತಿಯಲ್ಲಿ ಸಂಪೂರ್ಣವಾಗಿ ವಾರ್ಡಿನ ರಸ್ತೆ ಗುಂಡಿಗಳನ್ನು ಮುಚ್ಚಲು ಶ್ರೀಮತಿ ವಿಜಯಲಕ್ಷ್ಮಿ , ಸಹಾಯಕ ಅಭಿಯಂತರರು ರವರಿಗೆ ಸೂಚಿಸಿದರು.

2. ಸದಸ್ಯರು ವಾಹನ ನಿಲುಗಡೆಯನ್ನು ತೆರವುಗೊಳಿಸುವ ಬಗ್ಗೆ ಪ್ರಸ್ತಾಪಿಸಿದರು

   ನೋಡಲ್ ಅಧಿಕಾರಿಗಳು ವಾರ್ಡಿನ ಹಲವು ರಸ್ತೆ ಬದಿಗಳಲ್ಲಿ ಹಳೇಯ ಅನುಪಯುಕ್ತ ವಾಹನಗಳನ್ನು ನಿಲುಗಡೆ ಮಾಡಿರುವುದನ್ನು ಖುದ್ದಾಗಿ ಪರಿಶೀಲಿಸಿರುತ್ತೇನೆ. ಸದರಿ ವಾಹನಗಳನ್ನು ತೆರವುಗೊಳಿಸುವಂತೆ ಹಾಜರಿದ್ದ ಸಂಚಾರಿ ಪೋಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

3. ಸದಸ್ಯರು ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಅಸಮದಾನ ವ್ಯಕ್ತಪಡಿಸಿದರು.

   ನೋಡಲ್ ಅಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಬೀದಿ ದೀಪದ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸೂಚಿಸಿವುದಾಗಿ ತಿಳಿಸಿದರು.

4. ಸದಸ್ಯರು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವಂತೆ ಪ್ರಸ್ತಾಪಿಸಿದರು.

   ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡಿನ ಕೆಲವು ರಸ್ತೆಗಳನ್ನು ಖುದ್ದಾಗಿ ಪರಿಶೀಲಿಸಿದ್ದು, ಕಸ ವಿಲೇವಾರಿಯನ್ನು ಸೂಕ್ತವಾಗಿ ನಿರ್ವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಹಾಗೂ ಮಾರ್ಷಲ್ ರವರ ಸಹಾಯದಿಂದ ಕಸ ಎಸೆಯುವವರ ವಿರುದ್ಧ ಕ್ರಮ ಕೈಗೊಂಡು ಬ್ಲಾಕ್ ಸ್ಪಾಟ್‌ಗಳನ್ನು ವಾರ್ಡಿನಲ್ಲಿ ಸಂಪೂರ್ಣವಾಗಿ ತೆರವುಗೊಳಿಸುವಂತೆ ಸೂಚಿಸಿದರು. ಕೆಲವು ಪೌರಕಾರ್ಮಿಕರು ಗ್ಲೌಸ್ ಮತ್ತು ಮಾಸ್ಕ್‌ಗಳನ್ನು ಧರಿಸದೆ ಇರುವ ಬಗ್ಗೆ ಅಸಮಧಾನ ವ್ಯಕ್ತ ಪಡಿಸಿ, ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಕಡ್ಡಾಯವಾಗಿ ಧರಿಸುವಂತೆ ನಿರ್ದೇಶನ ನೀಡಲು ಅಧಿಕಾರಿಗಳಿಗೆ ಸೂಚಿಸಿದರು.

5. ಸದಸ್ಯರು ನೇತಾಜಿ ಆಟದ ಮೈಧಾನದಲ್ಲಿ ಹಾಲಿ ಇರುವ ಕಸ ವಿಂಗಡಣೆ ಘಟಕವನ್ನು ಸ್ಥಳಾಂತರಿಸುವ ಬಗ್ಗೆ ಪ್ರಸ್ತಾಪಿಸಿದರು.

Scanned with CamScanner

ಸಂಬಂಧಿಸಿದ ಅಧಿಕಾರಿಯಾದ ಶ್ರೀಮತಿ ಸಂಧ್ಯಾ ರವರು ಮಾತನಾಡಿ ಕಸ ವಿಂಗಡಣೆ ಘಟಕವನ್ನು ಸ್ಥಳಾಂತರಿಸುವ ಬಗ್ಗೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋದನೆ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.
ನೋಡಲ್ ಅಧಿಕಾರಿಗಳು ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಲು ಸಂಬಂಧಿಸಿದ ಅಧಿಕಾರಿಯಾದ ಶ್ರೀಮತಿ ಸಂಧ್ಯಾ ರವರಿಗೆ ಸೂಚಿಸಿದರು.

6. ಸದಸ್ಯರು ಎಸ್.ಡಬ್ಲ್ಯೂ.ಡಿ. ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕೈಗೊಂಡು ಪೂರ್ಣಗೊಳಿಸಲು ಪ್ರಸ್ತಾಪಿಸಿದರು.

ಇಲ್ಲದಿದ್ದಲ್ಲಿ ಪ್ರತಿ ಮಳೆಯಲ್ಲು 8ನೇ ಮುಖ್ಯ ರಸ್ತೆಯಲ್ಲಿ ಫ್ಲಡ್ಡಿಂಗ್ ಆಗುವ ಭೀತಿಯಿಂದ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಪ್ರಸ್ತಾಪಿಸಿದರು. ಸದರಿ ವಿಷಯಷ್ನು ನೋಡಲ್ ಅಧಿಕಾರಿಗಳು ಎಸ್.ಡಬ್ಲ್ಯೂ.ಡಿ.ಅಧಿಕಾರಿಗಳೊಂದಿಗೆ ಚರ್ಚಿಸಿ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

7. ಸದಸ್ಯರು ವಿಶ್ವೇಶ್ವರಯ್ಯ ಪಾರ್ಕ್ ನೇತಾಜಿ ಆಟದ ಮೈಧಾನವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಹಾಗೂ ವಾರ್ಡಿನಲ್ಲಿ ಒಂದು ಪ್ರಾಥಮಿಕ ಕೇಂದ್ರವನ್ನು ತೆರೆಯುವ ಬಗ್ಗೆ ಪ್ರಸ್ತಾಪಿಸಿದರು.

ನೋಡಲ್ ಅಧಿಕಾರಿಗಳು ಸದರಿ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿ ಶ್ರೀಮತಿ ವಿಜಯಲಕ್ಷ್ಮಿ ರವರಿಗೆ ಸೂಚಿಸಿದರು.

8. ಸದಸ್ಯರು ರವರು ತಿಮ್ಮಯ್ಯ ರಸ್ತೆ ಹಾಗೂ ಪ್ರಿಯದರ್ಶಿನಿ ಹೋಟೆಲ್ ಮುಂದೆ ಇರುವ ಮರದ ಕೊಂಬೆಗಳು ಒಣಗಿದ್ದು, ರಸ್ತೆಯಲ್ಲಿ ಓಡಾಡುವ ವಾಹನ ಸವಾರರ ಮೇಲೆ ಬೀಳುವ ಸಂಭವವಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ನೋಡಲ್ ಅಧಿಕಾರಿಗಳು ಸದರಿ ಸ್ಥಳವನ್ನು ಪರಿಶೀಲಿಸಿ, ಒಣಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಸ್ಥಳದಲ್ಲಿ ಹಾಜರಿದ್ದ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

9. ಸದಸ್ಯರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಮಾಡುವ ಮ್ಯಾನ್ ಹೋಲ್ ಗಳಿಂದ ಹೂಳು ತೆಗೆದು ಇದನ್ನು ತೆರವುಗೊಳಿಸದೆ ಇರುವ ಬಗ್ಗೆ ಅಸಮಧಾನ ವ್ಯಕ್ತ ಪಡಿಸಿದರು. ಹಾಗೂ ರಸ್ತೆಗಳಲ್ಲಿ ಪೈಪ್ ಅಳವಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ರಸ್ತೆ ಅಗೆದು ಅದನ್ನು ಮುಚ್ಚದೆ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿರುವುದಾಗಿ ಪ್ರಸ್ತಾಪಿಸಿದರು.

ನೋಡಲ್ ಅಧಿಕಾರಿಗಳು ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ.ರವರು ಮ್ಯಾನ್ ಹೋಲ್‌ಗಳಿಂದ ಹೂಳನ್ನು ತೆಗೆದು ಹಾಗೆ ಬಿಡುವುದರಿಂದ ಬ್ಲಾಕ್ ಸ್ಪಾಟ್‌ಗಳು ಹೆಚ್ಚಾಗುವ ಸಂಭವ ಇರುವ ಬಗ್ಗೆ ತಿಳಿಸಿದರು. ಸ್ಥಳದಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ಆಗಿಂದಾಗೆ ತೆರವುಗೊಳಿಸಲು ಸೂಚಿಸಿದರು ಹಾಗೂ ಮ್ಯಾನ್ ಹೋಲ್ ಕವರ್ ರಸ್ತೆಗಿಂತ ಎತ್ತರದಲ್ಲಿದ್ದು, ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗುವುದರಿಂದ ಅದನ್ನು ಪರಿಶೀಲಿಸುವಂತೆ ಸೂಚಿಸಿದರು.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Devaraj
10/11/2020

ನೋಡಲ್ ಅಧಿಕಾರಿಗಳು,
ವಾರ್ಡ್ ನಂ. 100/ಬಸವೇಶ್ವರನಗರ.

Scanned with CamScanner